**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 1038/20** **CW**–02 **PW**–02

**ಸಾಕ್ಷಿಯನ್ನು ದಿಃ 08.02.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಹೆಸರುಃ | ಪೂಜ |
| ತಂದೆಯ ಹೆಸರುಃ | ಹನುವಂತೇಗೌಡ |
| ವಯಸ್ಸುಃ | 21 ವರ್ಷ |
| ವೃತ್ತಿಃ | ವಿದ್ಯಾರ್ಥಿ |
| ವಾಸ ಸ್ಥಳಃ | ಚನ್ನರಾಯಪಟ್ಟಣ |

**ಮುಖ್ಯವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸ–1 ನನ್ನ ತಾಯಿ . ಚಾಸಾ 3 ರಿಂದ 5 ಗೊತ್ತು . ಆರೋಪಿಗಳು ಗೊತ್ತು . ದಿನಾಂಕ 02.10.2020 ರಂದು ರಾತ್ರಿ 9.30 ಸಮಯದಲ್ಲಿ ಆರೋಪಿಗಳು ಚರಂಡಿ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮ ಬಳಿ ಬಂದು ಚಾಸ 1 ರವರಿಗೆ ಅವ್ಯಾಚ ಶಬ್ಧಗಳಿಂದ ಬೈದು 2 ನೇ ಆರೋಪಿಯು ಹಾರೆಯಲ್ಲಿ ಚಾಸಾ 1 ರವರಿಗೆ ಹಲ್ಲೆ ಮಾಡಿರುತ್ತಾರೆ . ಹಾಗೇ 1 ನೇ ಆರೋಪಿ ಚಾಸಾ 3 ರವರಿಗೆ ಹಾರೆಯಿಂದ ಹೊಡೆದಿರುತ್ತಾರೆ . ನಂತರ ಆರೋಪಿಗಳು ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ . ನಾನು ಜಗಳ ಬಿಡಿಸಿರುತ್ತೇನೆ . ನಂತರ ಚಾಸಾ 1 ಮತ್ತು 3 ರವರು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರಗೆ ಹೋಗಿರುತ್ತೇನೆ. ಆ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ . ಸಾಕ್ಷಿಗೆ ಸದರಿ ಆರೆಯನ್ನು ನೋಡಿ ಗುರುತಿಸಿದ್ದು , ಅದನ್ನು ಈಗಾಗಲೆ ಎಂಒ 1 ಎಂದು ಗುರುತಿಸಲಾಗಿರುತ್ತದೆ .

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎನ್.ಕೆ ವಕೀಲರಿಂದಃ**

ನಾನು ಬಿಕಾಂ ವಿದ್ಯಾಭ್ಯಾಸ ಮಾಡುತ್ತಿದ್ದೇನೆ . ಆರೋಪಿಗಳು ನಮ್ಮ ಮನೆ ಮುಂದೆ ಇರುವ ಚರಂಡಿಯನ್ನು ಮುಚ್ಚಿ ಹಾಕಿದ್ದು , ಆ ವಿಚಾರಕ್ಕೆ ಗಲಾಟೆಯಾಗಿರುತ್ತದೆ .

ಪೋಲೀಸರು ತೆಗೆದುಕೊಂಡ ಹೇಳಿಕೆಯಲ್ಲಿ ಈ ವಿಚಾರ ನನಗೆ ಗೊತ್ತು . ಸದರಿ ಹೇಳಿಕೆಯಲ್ಲಿ ಚರಂಡಿ ವಿಚಾರಕ್ಕೆ ಗಲಾಟೆಯಾಗಿರುತ್ತದೆ ಎಂದು ತಿಳಿಸಿರುತ್ತೇನೆ . ಹೇಳಿಕೆ ಕೊಟ್ಟ ದಿನಾಂಕ ನನಗೆ ಗೂತ್ತಿಲ್ಲ . ಯಾವ ದರ್ಜೆ ಪೊಲೀಸರು ಹೇಳಿಕೆ ಪಡೆದುಕೊಂಡಿರುತ್ತಾರೆ ಗೊತ್ತಿಲ್ಲ . ನನ್ನ ಹೇಳಿಕೆಯಲ್ಲಿ ಚಾಸಾ 1 ರವರು ಮಳೆಯ ನೀರು ಮೋರಿಯಲ್ಲಿ ಹೋಗಲು ಪಕ್ಕದ ಮನೆಯವರ ಕಾಂಪೌಡ್ ತೂತು ಮಾಡಿರುವ ವಿಚಾರದಲ್ಲಿ ಎಂಬ ವಿಚಾರ ತಿಳಿಸಿರುವುದಿಲ್ಲ . ಆರೋಪಿಗಳು ಮತ್ತು ಚಾಸಾ 1 ರವರ ನಡುವೆ ಕಾಂಪೌಡ್ ವಿಚಾರಕ್ಕೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯ ನಡೆಯುತ್ತಿದೆ ಎಂದರೆ ಸರಿ . ಸದರಿ ಸಿವಿಲ್ ಪ್ರಕರಣದಲ್ಲಿ ಆರೋಪಿಗಳ ಕಾಂಪೌಂಡ್ ತೊಂದರೆ ಮಾಡಬಾರದು ಎಂದು ಅರ್ಜಿ ಸಲ್ಲಿಸಿರುವ ವಿಚಾರ ನನ್ನ ತಾಯಿ ಚಾಸಾ 1 ರವರಿಂದ ತಿಳಿದುಕೊಂಡಿರುತ್ತೇನೆ . ನಾನು , ಚಾಸಾ 1 ಆರೋಪಿಗಳ ಕಾಂಪೌಂಡ್ ಗೆ ತೂತು ಮಾಡಿದ್ದೆವು ಎಂದರೆ ಸರಿಯಲ್ಲ . ಆರೋಪಿಗಳು ಚಾಸಾ 1 ಮತ್ತು 3 ರವರ ಮೇಲೆ ಒಂದು ಕ್ರಿಮಿನಲ್ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ನಾವು ಆರೋಪಿಗಳ ಕಾಂಪೌಡ್ ರಂಧ್ರ ಮಾಡಿದ್ದು , ಅದನ್ನು ಆರೋಪಿಗಳು ಪ್ರಶ್ನೆ ಮಾಡಿದ್ದರಿಂದ ನಾವು ಆರೋಪಿಗಳಿಗೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ . ಆ ಸಂಬಂಧ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ . ಗಲಾಟೆ ಸ್ಥಳದ ಚೆಕ್ಕುಬಂದಿ ಪೂರ್ವಕ್ಕೆ ಪಾರಿಜಾತರವರ ಮನೆ , ಪಶ್ಚಿಮಕ್ಕೆ ಖಾಲಿ ಜಾಗ , ಉತ್ತರಕ್ಕೆ ನಮ್ಮ ಮನೆ , ದಕ್ಷಿಣಕ್ಕೆ ರಸ್ತೆ . ಸದರಿ ಚೆಕ್ಕುಬಂಧಿಯೊಳಗೆ ಯಾವುದೇ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ . ನಮ್ಮ ಮತ್ತು ಆರೋಪಿಗಳ ಮನೆ ಮಧ್ಯೆ ಕಾಂಪೌಡ್ ಇದೆ ಎಂದರೆ ಸರಿ . ಅದರ ಎತ್ತರ 5.5 . ಅದರ ಮಧ್ಯೆ ಯಾವುದೇ ಗೇಟ್ ಅಳವಡಿಸಿಲ್ಲ ಎಂದರೆ ಸರಿ . ಹಾಗಾಗಿ ಆರೋಪಿಗಳಾಗಲೀ ನಾವಾಗಲೀ ಪರಸ್ಪರ ಮನೆಗಳಿಗೆ ಹೋಗಲು ಆಗುವುದಿಲ್ಲ . ಗಲಾಟೆಯಾದಾಗ ಆರೋಪಿಗಳು ಕಾಂಪೌಡ್ ನಿಂದ ನಮ್ಮ ಮನೆ ಕಡೆಗೆ

ಬಂದಿರುತ್ತಾರೆ . ಕಾಂಪೌಂಡ್ ಎತ್ತರವಿರುವ ಕಾರಣ ಹತ್ತಿ ಬರಲು ಆಗುವುದಿಲ್ಲ ಎಂದರೆ ಸರಿ . ಆ ಕಾರಣ ಆರೋಪಿಗಳು ಚಾಸಾ 1 ಮತ್ತು 3 ರವರ ಮೇಲೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ಚಾಸಾ 1 ರವರು ನನ್ನ ತಾಯಿಯಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಮ್ಮ ಅಕ್ಕಪಕ್ಕದ ಮನೆಯವರು ಜಗಳ ಬಿಡಿಸಿರುವುದಿಲ್ಲ . ಚಾಸಾ 3 ರವರ ಬಲಗೈ ಮುಂಗೈಗೆ ಹಾರೆಯಿಂದ ಹೊಡೆದಿರುತ್ತಾರೆ . ಆ ವಿಚಾರ ಹೇಳಿಕೆಯಲ್ಲಿ ತಿಳಿಸಿರುತ್ತೇನೆ . ರಕ್ತ ಗಾಯವಾಗಿರುತ್ತದೆ . ಸದರಿ ಆರೆ 4 ಅಡಿ ಇರುತ್ತದೆ . ಅದನ್ನು ಆರೇಪಿಗಳು ಎಲ್ಲಿಂದ ತಂದಿರುತ್ತಾರೆ ಗೊತ್ತಿಲ್ಲ . ಆ ಸಮಯದಲ್ಲಿ ನಮ್ಮ ಮೇಲೆ ಕಟ್ಟಡ ನಿರ್ಮಾಣವಾಗುತ್ತಿತ್ತು ಎಂದರೆ ಸರಿ . ಆ ಸಂಬಂಧ ಆರೆ ಗುದಲಿಯನ್ನು  ನಮಗೆ ಉಪಯೇಗಿಸುತ್ತಿದ್ದರು ಎಂದರೆ ಸರಿ . ಎಂಒ 1 ನಾವು ನಮ್ಮ ಮನೆಗೆ ಉಪಯಾೋಗಿಸುತ್ತಿದ್ದು, ಅದನ್ನು ಈ ಪ್ರಕರಣಕ್ಕಾಗಿ ತಂದು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ . ಎಂ 1 ನಮಗೆ ಸೇರಿರುತ್ತದೆ ಎಂದರೆ ಸರಿಯಲ್ಲ . ಆರೋಪಿತರ ದೂರಿಗೆ ಪ್ರತಿಯಾಗಿ ನಾನು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಚಾಸಾ 4 ಮತ್ತು 5 ನನ್ನ ಅಣ್ಣಂದಿರು .

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ದೀಪು.ಬಿ.ಸಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**